ಮೆಃ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ

ಸಿ.ಸಿ ನಂ- 576/2016

ಪಿರ್ಯಾದುದಾರ

| | |
|---|---|
| ಹೆಸರು | ಶ್ರೀ. ಮಲ್ಲಪ್ಪ ಲದ್ದಿ |
| ತಂದೆಯ ಹೆಸರು | ಭೀಮಪ್ಪ ಲದ್ದಿ |
| ವಯಸ್ಸು | 50 |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ನಾಗರಾಳ |

**ದಿನಾಂಕಃ 13-07-2022 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.**

**ದೋಷಾರೋಪಣೆ ಪೂರ್ವ ವಿಚಾರಣೆ ಃ- ಶ್ರಿ. ಎ.ಎಸ್.ವಾಯ್., ರವರಿಂದ ಃ**

ನಾನು ನಾಗರಾಳದಲ್ಲಿ ವಾಸಿಸುತ್ತಿದ್ದು, ಬಸಪ್ಪ ಭೀಮಪ್ಪ ಲದ್ದಿ ಇವರ ಮೇಲೆ ಪಿರ್ಯಾದಿಯನ್ನು ದಾಖಲಿಸಿರುತ್ತೇನೆ. ಬಸಪ್ಪ ಲದ್ದಿ ನನಗೆ ಅಣ್ಣನಾಗಬೇಕು. ನನ್ನ ಮತ್ತು ಬಸಪ್ಪನ ಮಧ್ಯೆ ವಾಟ್ನಿಯಾಗಿದ್ದು ನನ್ನ ಪಾಲಿಗೆ ರಿ. ಸ.ನಂ.84/1 ಬಿ ಕ್ಷೇತ್ರ 3 ಎಕರೆ ಬಂದಿರುತ್ತದೆ. ಹಾಗೂ ಬಸಪ್ಪ ಲದ್ದಿ ಈತನ ಹಿಸ್ಸೆಗೆ ರಿ. ಸ.ನಂ.84/1 ಎ ಕ್ಷೇತ್ರ 6 ಎಕರೆ 1 ಗುಂಟೆ ಇರುತ್ತದೆ. ಸದರಿ ವಾಟ್ನಿಯ ನಂತರ ನಮ್ಮ ನಮ್ಮ ಜಮೀನುಗಳಲ್ಲಿ ನಾವು ಕಬ್ಜೆಯನ್ನು ಹೊಂದಿ ಇರುತ್ತಿದ್ದೇವೆ. ವಾಟ್ನಿ ಪತ್ರದಲ್ಲಿ ದಾರಿ ಹಕ್ಕು ನನಗೆ ಇದೆ ಎನ್ನುವ ಬಗ್ಗೆ ನಮೂದಿಸಿದ್ದು ಇರುತ್ತದೆ. ಸದರಿ ನನಗೆ ಇರುವ ದಾರಿ ಹಕ್ಕು ಮತ್ತು ಅದರ ಉಪಯೋಗಕ್ಕೆ ಬಸಪ್ಪ ಲದ್ದಿ ಇವರು ಅಡ್ಡಿಯಾಗುತ್ತಿದ್ದು, ದಾರಿಯಲ್ಲಿ ನೀರು ಬಿಡುವುದು, ದನ ಬಿಡುವುದು ಹಾಗೂ ತೆಗ್ಗು ತೆಗೆಯುವುದು ಮಾಡಿರುತ್ತಾರೆ. ಈ ಬಗ್ಗೆ ನಾನು ಆಕ್ಷೇಪಣೆ ಮಾಡಿದ್ದಕ್ಕೆ ಬಸಪ್ಪ ಲದ್ದಿ ಈತನು ನನಗೆ ಹೊಡೆದು ಗಾಯಪಡಿಸಿ ಅವಾಚ್ಯವಾಗಿ ಬೈದು ಜೀವಬೆದರಿಕೆ ಹಾಕಿರುತ್ತಾನೆ. 2015 ರಲ್ಲಿ ಈ ಜಗಳ ನಡೆದಿರುತ್ತದೆ. ನಮ್ಮ ಜಗಳವನ್ನು ರವಿ ರಂಗಪ್ಪ ಗೋನ್ಯಾಗೋಳ ಮತ್ತು ಪಾಂಡು ಮಾರುತಿ ಗೋನ್ಯಾಗೋಳ ಇವರು ಬಿಡಿಸಿರುತ್ತಾರೆ.

ಜಗಳದ ನಂತರ ನಾನು ಬಾಗಲಕೋಟೆಯ ಪೋಲಿಸ ಠಾಣೆಗೆ ಹೋದೆನು. ಠಾಣಾ ಸಿಬ್ಬಂದಿಯವರು ನನ್ನ ಪಿರ್ಯಾದಿ ಸಿವಿಲ್ ಸ್ವರೂಪದ್ದಾಗಿದ್ದು ಹಾಗೂ ಈಗಾಗಲೇ ಅಸಲ ದಾವಾ ನಂ.58/2014 ರಲ್ಲಿ ಸ್ಟೆಟಸಕೋ ಆದೇಶ ಇರುವುದರಿಂದ ನನ್ನ ಪಿರ್ಯಾದಿಯನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿ ಕಳುಹಿಸಿದರು. ಆಗ ನಾನು ಈ ನ್ಯಾಯಾಲಯದಲ್ಲಿ ಸದರಿ ಪಿರ್ಯಾದಿಯನ್ನು ದಾಖಲಿಸಿರುತ್ತೇನೆ.

ನಾನು ಪೋಲಿಸರ ಮುಂದೆ ನೀಡಿದ ಪಿರ್ಯಾದಿ ಮತ್ತು ಅದಕ್ಕೆ ಸಂಬಂಧಿಸಿದ ಸ್ವೀಕೃತಿ ಪ್ರತಿ ಮತ್ತು ನನ್ನ ಜಮೀನಿನ ಪಹಣಿ ಪತ್ರಿಕೆ ಹಾಜರುಪಡಿಸಿರುತ್ತೇನೆ. ನನ್ನ ಮತ್ತು ಬಸಪ್ಪ ಲದ್ದಿ ಮಧ್ಯೆ ಆದ ವಾಟ್ನಿ ಪತ್ರದ ಜರಾಕ್ಸ ಪ್ರತಿಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಗಳು ಈಗಾಗಲೇ ನಿಶಾನಿಪಿಗೊಂಡಿವೆ.

ಆದ್ದರಿಂದ ನಾನು ಆರೋಪಿತನ ವಿರುದ್ದ ಕ್ರಮ ಕೈಗೊಳ್ಳುವಂತೆ ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಗೈರು ಹಾಜರು ಇದ್ದ ಕಾರಣ ಪಾಟೀ ಸವಾಲು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಜೆಎಂಎಫ್‌ಸಿ ಮುಧೋಳ. ಸಾಕ್ಷಿಯ ಸಹಿ